ಬದುಕುವ ಆಸೆ ಅವರದ್ದು. ಇಂಥ ಆಲೋಚನೆಗಳು ಮದುವೆ ಎಂಬ ಕಲ್ಪನೆಯಿಂದ ಅವರನ್ನು ದೂರಗೊಳಿಸುತ್ತವೆ.

### ರೈತರಿಗೆ ಯಾಕೆ ಹೆಣ್ಣು ಕೊಡಲ್ಲ...

‘ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶ ಕಡಿಮೆ. ಕೃಷಿಯೇ ಜೀವಾಳ. ಎಕರೆಗಟ್ಟಲೇ ಜಮೀನು ಇರುವಾಗ ಮತ್ತು ಕುಟುಂಬವು ಅದನ್ನೇ ನಂಬಿರುವಾಗ, ಎಲ್ಲವನ್ನೂ ಬಿಟ್ಟು ನಗರಪ್ರದೇಶಕ್ಕೆ ಹೋಗಿ ಹೇಗೆ ನೆಲೆಸಲು ಸಾಧ್ಯ? ರೈತರು ಕಲಿತದ್ದು ಕಡಿಮೆ ಇರಬಹುದು. ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದಿರಬಹುದು. ಆದರೆ, ಕುಟುಂಬದ ಒಲವು, ಒಗ್ಗಟ್ಟು ಮತ್ತು ಸಹಕಾರ ವಿಷಯವು ಮುಂದಾದಾಗ, ಎಲ್ಲವನ್ನೂ ನಿಭಾಯಿಸುತ್ತಾರೆ. ಯಾರನ್ನೂ ಕೈಬಿಡಲ್ಲ. ಮನಸ್ಸು ನೋಯಿಸಲ್ಲ. ಇದ್ದುದರಲ್ಲೇ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ. ಕಷ್ಟವೋ–ನಷ್ಟವೋ, ಅದರಲ್ಲೇ ಖುಷಿ ಕಂಡುಕೊಳ್ಳಲು ಹಂಬಲಿಸುತ್ತಾರೆ. ನಗರ ಪ್ರದೇಶದಲ್ಲಿನ ಥಳಕು, ಬಳುಕಿಗೆ ಮಾರು ಹೋಗಲ್ಲ. ಆದರೆ, ಮದುವೆಯಾದ ಹುಡುಗಿಯನ್ನು ಕೈಬಿಡಲ್ಲ’ ಎಂಬುದು ಹಾವೇರಿ ಜಿಲ್ಲೆಯ ಹಾನಗಲ್‌ನ ರೈತ ವೆಂಕಟೇಶ ಹೇಳುವ ದೃಢವಾದ ಮಾತಿದು.



ಆದರೆ, ಮದುವೆಯಾಗುವ ಹಂತದಲ್ಲಿರುವ ಹೆಣ್ಣಿಗೆ ಕಲ್ಪನೆಗಳೇ ಭಿನ್ನ. ವೇಗವಾಗಿ ಸಾಗುತ್ತಿರುವ ಈ ಜಗತ್ತಿನಲ್ಲಿ ತಾನೂ ಸಾಗಬೇಕು. ಅದರಷ್ಟೇ ಈಜಬೇಕು ಎಂಬ ಅದಮ್ಯ ಆಸೆ. ಅದಕ್ಕೆ ಮದುವೆಯ ಕಟ್ಟುಪಾಡಿಗೆ ಸಿಲುಕಲು ಅಥವಾ ಹಳ್ಳಿಗಳಲ್ಲಿ ಬದುಕು ಕಂಡುಕೊಳ್ಳಲು ಆಕೆ ಇಷ್ಟಪಡಲ್ಲ.

‘ಆಗಾಗ ಹುಬ್ಬಳ್ಳಿಗೆ ಹೋಗುವುದು, ಒಂದೆರಡು ಸಲ ಬೆಳಗಾವಿಗೆ ಹೋಗಿದ್ದು ಬಿಟ್ಟರೆ ದೊಡ್ಡ ಊರುಗಳನ್ನು ನಾನು ನೋಡಿಲ್ಲ. ಧಾರಾವಾಹಿ, ಸಿನಿಮಾ, ವಿಡಿಯೊಗಳಲ್ಲಿ ದೊಡ್ಡ ಊರುಗಳನ್ನು ನೋಡಿದಾಗ, ಅಲ್ಲಿನ ಬದುಕು ಕಂಡಾಗ ನನಗೂ ಬೆಂಗಳೂರಿನಲ್ಲಿ ಇರಬೇಕು ಅನ್ನಿಸುತ್ತದೆ. ಇಲ್ಲಿ ಓದಿದ್ದು, ಕಲಿತಿದ್ದು ಸಾಕು. ದೊಡ್ಡ ಊರಿನಲ್ಲಿ ಬಾಳಬೇಕು, ಕೆಲಸ ಮಾಡಬೇಕು ಎಂಬ ಆಸೆ ಇರುತ್ತೆ. ನಾವು ಖುಷಿಪಡುವುದು ಬೇಡವೇ? ಎಲ್ಲದಕ್ಕೂ ಕುಟುಂಬದ ಬಯಕೆಯನ್ನು ಈಡೇರಿಸುತ್ತಾ ಇರಬೇಕೆ? ಹೀಗೆ ಯೋಚಿಸುವುದರಲ್ಲಿ ತಪ್ಪೇನಾದರೂ ಇದೇನಾ’ ಎಂದು ಧಾರವಾಡ ಜಿಲ್ಲೆಯ ಕುಂದಗೋಳದ ಗೌರಿ ಪ್ರಶ್ನಿಸುತ್ತಾಳೆ.

ಹುಡುಗನ ಆಸೆ, ಹುಡುಗಿಯ ಬಯಕೆ ಮತ್ತು ಪೋಷಕರ ಕನಸು ಇವು ಎಲ್ಲವೂ ಒಂದಕ್ಕೊಂದು ಹೊಂದಾಣಿಕೆ ಆಗದೇ ಬಹುಶಃ ಮದುವೆ ಎಂಬುದು ಒಂದು ತಾಕಲಾಟವಾಗಿ ಉಳಿಯುತ್ತದೆ. ಒಬ್ಬರ ಆಸೆ, ಇನ್ನೊಬ್ಬರ ನಿರಾಸೆ ಮತ್ತು ಅವರ ಒತ್ತಡದಿಂದ ಕುಟುಂಬದಲ್ಲಿ ಯಾವತ್ತೂ ನೆಮ್ಮದಿ ನೆಲೆಯೂರುವುದಿಲ್ಲ. ಒಂದು ಹಂತದಲ್ಲಿ ಒಬ್ಬರಿಗೊಬ್ಬರು ತ್ಯಾಗ ಮಾಡಬಹುದು ಮತ್ತು ಸರ್ವಸ್ವವನ್ನು ಧಾರೆ ಎರೆಯಬಹುದು. ಆದರೆ, ಅದರ ನೆಪದಲ್ಲಿ ಪರೋಕ್ಷವಾಗಿ ಮನಸ್ಸಿನಾಳದಲ್ಲಿ ಮೂಡುವ ಬಿರುಕು ಮತ್ತು ಅಸಮಾಧಾನ ಸುಲಭವಾಗಿ ಶಮನ ಆಗುವುದಿಲ್ಲ.

### ಮೈಸೂರು ಸೀಮೆ ಸ್ಥಿತಿ ಭಿನ್ನವಿಲ್ಲ

ಹುಡುಗಿಯರ ಕೊರತೆ ಸಮಸ್ಯೆ ಉತ್ತರ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ದಕ್ಷಿಣ ಕರ್ನಾಟಕದ ಮೈಸೂರು ಸೀಮೆಯಲ್ಲೂ ವ್ಯಾಪಕವಾಗಿದೆ. ಜಾತಿಯ ಭೇದವಿಲ್ಲದೇ, ಯಾವ ಜಾತಿಯವರೇ ಆಗಿದ್ದರೂ ಮದುವೆಗೆ ಹುಡುಗಿ ಸಿಗುತ್ತಿಲ್ಲ. 2022ರ ನವೆಂಬರ್‌ನಲ್ಲಿ ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿ ಮಠದಲ್ಲಿ ವಧು ವರರ ಸಮಾವೇಶ ಆಯೋಜಿಸಿದಾಗ, ಅಲ್ಲಿ ವಧುಗಳ ಸಂಖ್ಯೆ 250 ಇದ್ದರೆ, ವರಗಳ ಮತ್ತು ಸಂಬಂಧಿಕರ ಸಂಖ್ಯೆ 25 ಸಾವಿರ ದಾಟಿತ್ತು.

‘ಸರ್ಕಾರಿ ನೌಕರನಿಗಿಂತ ಹೆಚ್ಚು ದುಡಿಯುತ್ತೇನೆ. ಹಣ ಸಂಪಾದಿಸುತ್ತೇನೆ. ಅವರಿಗಿಂತ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದರೂ ಹುಡುಗಿ ಮತ್ತು ಅವರ ತಂದೆ–ತಾಯಿ ನಮ್ಮ ಮಾತು ನಂಬುವುದಿಲ್ಲ. ಸರ್ಕಾರಿ ನೌಕರಿಯಿದ್ದರೆ, ಪರ್ಮನೆಂಟಾಗಿ ಹಣ ಬರುತ್ತೆ. ಯಾರ ಮೇಲೆಯೂ ಅವಲಂಬಿಸುವುದು ಇರಲ್ಲ. ಸೌಲಭ್ಯಗಳು ಜೋರು ಇರುತ್ತವೆ. ಬೇಡವೆಂದರೂ ಲಂಚ ಅಲ್ಲದೇ ಬೇರೆ ಬೇರೆ ರೂಪದಲ್ಲಿ ಹಣ ಬರುತ್ತೆ. ಕೃಷಿಯನ್ನು ನಂಬಿದರೆ, ಬದುಕು ಕಷ್ಟ. ಮಳೆ ಬಾರದಿದ್ದರೆ ಮತ್ತು ನೀರು ಸಿಗದಿದ್ದರೆ, ಸಂಪೂರ್ಣ ನಷ್ಟ. ಇದೆಲ್ಲವನ್ನೂ ನಂಬಿ ಮಗಳನ್ನು ಕೊಡಲಿಕಾಗುತ್ತಾ ಎಂದು ಪೋಷಕರು ಪ್ರಶ್ನಿಸುತ್ತಾರೆ. ನಾನು ಅವರಿಗೆ ಏನೆಂದು ಉತ್ತರಿಸಲಿ’ ಎಂದು ಹುಣಸೂರಿನ ರೈತ